# ಶ್ರೀ ಲೋಕನಾಥ ಗೋಸ್ವಾಮಿ

ಶ್ರೀ ಲೋಕನಾಥ ಗೋಸ್ವಾಮಿಗಳು ಶ್ರೀ ಚೈತನ್ಯ ಮಹಾಪ್ರಭುಗಳ ಆಪ್ತ ಸಹಚರರಾಗಿದ್ದರು. ಅವರು ವಾಸವಿದ್ದುದು ಬಂಗಾಳದ 'ತಾಲಖಡಿ' ಎನ್ನುವ ಗ್ರಾಮದಲ್ಲಿ. ಆದರೆ, ಮಹಾಪ್ರಭುಗಳ ಆದೇಶದ ಮೇರೆಗೆ ಅವರು ವೃಂದಾವನಕ್ಕೆ ತೆರಳಿ, ಅಲ್ಲಿಯೇ ನೆಲೆ ನಿಂತರು. ವೃಂದಾವನದಲ್ಲಿ ಶ್ರೀಗೋಕುಲನಂದ ದೇವಾಲಯವನ್ನೂ ಪ್ರತಿಷ್ಠಾಪಿಸಿದರು.

ಶ್ರೀ ಲೋಕನಾಥ ಗೋಸ್ವಾಮಿಗಳು ಶ್ರೀಲ ನರೋತ್ತಮ ದಾಸ ಠಾಕುರರ ಆಧ್ಯಾತ್ಮಿಕ ಗುರುಗಳಾಗಿದ್ದರು ಮತ್ತು ನರೋತ್ತಮ ದಾಸ ಠಾಕುರರು ಅವರ ಏಕಮಾತ್ರ ಶಿಷ್ಯರು. ಶ್ರೀ ಲೋಕನಾಥರು ಚೈತನ್ಯ ಚರಿತಾಮೃತದಲ್ಲಿ ತಮ್ಮ ಹೆಸರನ್ನು ಉಲ್ಲೇಖಿಸಬಾರದೆಂದು ನಿರ್ದೇಶಿಸಿದ್ದರು. ಆದ್ದರಿಂದ ಈ ಮಹತ್ಕೃತಿಯಲ್ಲಿ ಅವರ ಬಗ್ಗೆ ವಿವರಗಳು ದೊರೆಯದು. ಆದರೆ ಶ್ರೀ ನರೋತ್ತಮ ದಾಸರು ತಮ್ಮ ಆಧ್ಯಾತ್ಮಿಕ ಗುರುಗಳನ್ನು ಕುರಿತು 'ಪ್ರಣಾಮ ಮಂತ್ರ' ರಚಿಸಿರುವರು.

ಶ್ರೀ ಅದ್ವೈತಾಚಾರ್ಯರ ಅನುಯಾಯಿಗಳಾಗಿದ್ದ ಶ್ರೀ ಪದ್ಮನಾಭ ಭಟ್ಟಾಚಾರ್ಯ, ಶ್ರೀಮತಿ ಸೀತಾದೇವಿಯರ ಪುತ್ರ ಶ್ರೀಲೋಕನಾಥರು ಬಾಲ್ಯದಿಂದಲೂ ಭಕ್ತಿಭಾವವನ್ನು ಪ್ರಕಟಿಸುತ್ತಿದ್ದರು. ತಾರುಣ್ಯಕ್ಕೆ ಕಾಲಿಟ್ಟ ಮೇಲೆ ಒಂದು ದಿನ ಅವರು ತಮ್ಮ ಮನೆ, ತಂದೆ-ತಾಯಿಗಳೆಲ್ಲರನ್ನು ಬಿಟ್ಟು ಮಹಾಪ್ರಭುಗಳ ದರ್ಶನಕ್ಕೆಂದು ನವದ್ವೀಪಕ್ಕೆ ಹೊರಟುಬಿಟ್ಟರು. ಅಲ್ಲಿಂದ, ಅವರ ಆದೇಶದ ಮೇರೆಗೆ ವೃಂದಾವನಕ್ಕೆ ತೆರಳಿದರು. ಮತ್ತೆಂದೂ ಅವರು ತಮ್ಮ ಮನೆಗೆ ಮರಳಲಿಲ್ಲ.

ಮುಂದಿನ ದಿನಗಳಲ್ಲಿ ಸಂನ್ಯಾಸಾನಂತರ ಶ್ರೀ ಚೈತನ್ಯ ಮಹಾಪ್ರಭುಗಳು ದಕ್ಷಿಣ ಭಾರತ ಯಾತ್ರೆ ಕೈಗೊಂಡಾಗ ಶ್ರೀ ಲೋಕನಾಥರು ಅವರನ್ನು ಹುಡುಕುತ್ತ ದಕ್ಷಿಣಕ್ಕೆ ಹೊರಟರು. ಆದರೆ ಅವರಿಂದ ಮಹಾಪ್ರಭುಗಳ ಭೇಟಿ ಸಾಧ್ಯವಾಗಲಿಲ್ಲ. ಆ ಸಮಯದಲ್ಲಿ ಅವರು ವೃಂದಾವನಕ್ಕೆ ತೆರಳಿದ್ದರು. ಹೀಗೆ ಲೋಕನಾಥರಿಗೆ ಮಹಾಪ್ರಭುಗಳನ್ನು ಕಾಣುವುದು ಸಾಧ್ಯವೇ ಆಗಲಿಲ್ಲ. ಅವರ ದೈನ್ಯವನ್ನು ಮನಗಂಡ ಮಹಾಪ್ರಭುಗಳು ಕನಸಿನಲ್ಲಿ ದರ್ಶನವಿತ್ತು ಲೋಕನಾಥರಿಗೆ ಸಾಂತ್ವನ ನೀಡಿ ಹರಸಿದರು.

ಮಹಾಪ್ರಭುಗಳ ಭಕ್ತರೆಲ್ಲ ಶ್ರೀ ಚೈತನ್ಯ ಲೀಲೆಯಲ್ಲಿನ ತಮ್ಮ ಪಾತ್ರ ಮುಗಿಸಿ ಭಗವದ್ಧಾಮಕ್ಕೆ ಮರಳಿದ ಅನಂತರವೂ ಲೋಕನಾಥರು ಬಹಳ ಕಾಲ ಭಕ್ತಿಸೇವೆಯಲ್ಲಿ ನಿರತರಾಗಿದ್ದು ಕೃಷ್ಣಾಷ್ಟಮಿಯ ದಿನ ತಾವೂ ಅವರನ್ನು ಕೂಡಿಕೊಂಡರು.

# ಶ್ರೀ ಗೋಪಾಲಭಟ್ಟ ಗೋಸ್ವಾಮಿ

ಶ್ರೀಲ ಗೋಪಾಲಭಟ್ಟ ಗೋಸ್ವಾಮಿ, ಶ್ರೀ ಚೈತನ್ಯ ಮಹಾಪ್ರಭುಗಳ ಪ್ರಮುಖ ಶಿಷ್ಯರಲ್ಲೊಬ್ಬರು. ಅವರ ತಂದೆ ಶ್ರೀವೇಂಕಟ ಭಟ್ಟ. ಅವರು ಕೂಡ ಶ್ರೀ ಚೈತನ್ಯ ಮಹಾಪ್ರಭುಗಳ ಅನುಚರರಾಗಿದ್ದರು.

ತಮ್ಮ ದಕ್ಷಿಣ ಭಾರತ ಯಾತ್ರೆಯ ಸಂದರ್ಭದಲ್ಲಿ ಮಹಾಪ್ರಭುಗಳು ವೇಂಕಟಭಟ್ಟರ ಮನೆಯಲ್ಲಿ ಕೆಲಕಾಲ ತಂಗಿದ್ದರು. ಆ ಸಮಯದಲ್ಲಿ ಗೋಪಾಲಭಟ್ಟರು ಚಿಕ್ಕ ಬಾಲಕನಾಗಿದ್ದರು. ಅವರು ಅತ್ಯಂತ ವಿನಮ್ರತೆಯಿಂದ ಮಹಾಪ್ರಭುಗಳ ಪದತಲದಲ್ಲಿ ಸೇವೆ ಅರ್ಪಿಸಿದ್ದರು. ಇದರಿಂದ ಸಂತುಷ್ಟರಾಗಿದ್ದ ಮಹಾಪ್ರಭುಗಳು ತಮ್ಮ ಮಡಿಲಲ್ಲಿ ಕುಳ್ಳಿರಿಸಿಕೊಂಡು ಪ್ರೀತಿಯಿಂದ ಮುದ್ದಿಸಿದ್ದರು. ಜೊತೆಗೆ ಅವರ 'ಮಹಾಪ್ರಸಾದ'ವನ್ನು ಪಡೆಯುವ ಭಾಗ್ಯವೂ ಒಮ್ಮೊಮ್ಮೆ ಬಾಲಕ ಗೋಪಾಲನಿಗೆ ಲಭಿಸುತ್ತಿತ್ತು. ಮಹಾಪ್ರಭುಗಳು 'ಮುಂದೆ ದೊಡ್ಡ ಆಚಾರ್ಯನಾಗು' ಎಂದು ಗೋಪಾಲ ಭಟ್ಟರನ್ನು ಹರಸಿದ್ದರು.

ಶ್ರೀ ಚೈತನ್ಯ ಮಹಾಪ್ರಭುಗಳು ಚಾತುರ್ಮಾಸ್ಯ ಪರ್ಯಂತ ಶ್ರೀರಂಗ ಕ್ಷೇತ್ರದಲ್ಲಿದ್ದ ಶ್ರೀ ವೇಂಕಟಭಟ್ಟರ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು. ಆಗ ಬಾಲಕ ಗೋಪಾಲಭಟ್ಟರು ಪ್ರತಿದಿನವೂ ಅವರ ಕಾಲುಗಳನ್ನು ಒತ್ತುತ್ತ ಸೇವೆ ಸಲ್ಲಿಸುತ್ತಿದ್ದರು. ಇದರಿಂದ ಸಂಪ್ರೀತರಾದ ಮಹಾಪ್ರಭುಗಳು ಅವರಿಗೆ ಲಕ್ಷ್ಮೀದೇವಿಯ ಸ್ಥಾನ, ಲಕ್ಷ್ಮೀ-ನಾರಾಯಣರ ಮತ್ತು ಗೋಪಿಯರಿಂದೊಡಗೂಡಿದ ರಾಧಾಗೋವಿಂದರ ಪೂಜೆಗಳ ನಡುವಿನ ವ್ಯತ್ಯಾಸ ಮೊದಲಾದ ಸಂಗತಿಗಳನ್ನು ಕುರಿತು ಬೋಧಿಸಿದರು. ಮಹಾಪ್ರಭುಗಳು ಆದೇಶದಂತೆ ಗೋಪಾಲಭಟ್ಟರು ಕೆಲ ವರ್ಷಗಳ ಕಾಲ ಮನೆಯಲ್ಲೇ ಇದ್ದುಕೊಂಡು ತಂದೆ-ತಾಯಿಯರಿಗೆ ಸೇವೆ ಸಲ್ಲಿಸಿ ತಮ್ಮ ಪ್ರಾಥಮಿಕ ಕರ್ತವ್ಯ ನೆರವೇರಿಸಿದರು. ಮುಂದೆ ವೃಂದಾವನಕ್ಕೆ ತೆರಳಿ ಶ್ರೀಲ ರೂಪ ಗೋಸ್ವಾಮಿಗಳನ್ನು ಭೇಟಿಯಾದರು. ಈ ವೇಳೆಗೆ ಪುರಿಯಲ್ಲಿದ್ದ ಶ್ರೀ ಚೈತನ್ಯ ಮಹಾಪ್ರಭುಗಳು ಗೋಪಾಲಭಟ್ಟರು ವೃಂದಾವನಕ್ಕೆ ಬಂದಿರುವ ಸಂಗತಿ ಕೇಳಿ ಹರ್ಷಗೊಂಡರು. ಮತ್ತು ಸಂದೇಶವಾಹಕರ ಮೂಲಕ 'ಬಾಬಾಜಿ' ಗಳು ಧರಿಸುವ ಕೌಪೀನ ಮತ್ತು ಮೇಲು ಹೊದಿಕೆಯನ್ನು ಕಳುಹಿಸಿಕೊಟ್ಟರು. ಇದು 'ಪರಿತ್ಯಾಗದ ಜೀವನ' ನಡೆಸುವಂತೆ ಅವರು ಗೋಪಾಲಭಟ್ಟರಿಗೆ ನೀಡಿದ ಸೂಚನೆಯಾಗಿತ್ತು. ಇದರಿಂದ ಧನ್ಯತಾಭಾವ ಪಡೆದ ಭಟ್ಟರು ಮಹಾಪ್ರಸಾದವೆಂಬಂತೆ ಅವನ್ನು ಸ್ವೀಕರಿಸಿದರು. ಮುಂದೆ ಅವರು ವೃಂದಾವನದ ವಿವಿಧ ಕುಂಡಗಳ ಬಳಿ ವಾಸಿಸುತ್ತಾ, ಅಧ್ಯಯನ, ಲೇಖನಗಳಲ್ಲಿ ತೊಡಗಿಕೊಂಡರು.

ಗೋಪಾಲಭಟ್ಟ ಗೋಸ್ವಾಮಿಗಳು ವೃಂದಾವನದಲ್ಲಿ 'ರಾಧಾರಮಣದೇವ' ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ರಾಧಾರಮಣದೇವನಿಗೆ ಸೇವೆ ಸಲ್ಲಿಸುವುದು ಗೋಪಾಲಭಟ್ಟರ ಅಚ್ಚುಮೆಚ್ಚಿನ ಕೆಲಸವಾಗಿದ್ದಿತು. ಭಕ್ತಿರತ್ನಾಕರ (4ನೇತರಂಗ) ದಲ್ಲಿ ಹೇಳಿರುವಂತೆ, ''ಗೋಪಾಲಭಟ್ಟ ಗೋಸ್ವಾಮಿಗಳು ಕೃಷ್ಣಪ್ರೇಮದಿಂದ ಉನ್ಮತ್ತರಾದಾಗ ಶ್ರೀ ರಾಧಾರಮಣನು ಗೌರಾಂಗದೇವನಾಗಿ ತನ್ನನ್ನು ತೋರ್ಪಡಿಸಿಕೊಳ್ಳುತ್ತಿದ್ದನು.''